**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು**

**ಪತ್ರಿಕಾ ಪ್ರಕಟಣೆ**

ವಿಷಯ: ಶೈಕ್ಷಣಿಕ ರಂಗದಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ನೌಕರ ಮತ್ತು ಅಧಿಕಾರಿಗಳ ಮಕ್ಕಳಿಗೆ ನೀಡುವ ನಗದು ಪುರಸ್ಕಾರದ ಮೊತ್ತವನ್ನು ಹೆಚ್ಚಿಸಿರುವ ಹಾಗೂ ಪ್ರಸಕ್ತ ವರ್ಷದಿಂದ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ನೌಕರರ ಮತ್ತು ಅಧಿಕಾರಿಗಳ ಮಕ್ಕಳಿಗೂ ನಗದು ಪುರಸ್ಕಾರ ನೀಡುವ ಬಗ್ಗೆ.

ಕರಾರಸಾನಿಗಮದಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಇಂತಹವುಗಳಲ್ಲಿ ಶೈಕ್ಷಣಿಕ ಶಿಕ್ಷಣದಲ್ಲಿ ಹೆಚ್ಚು ಅಂಕಗಳನ್ನು ಗಳಸಿದ ನೌಕರರ ಮತ್ತು ಅಧಿಕಾರಿಗಳ ಮಕ್ಕಳಗೆ ನಗದು ಪುರಸ್ಕಾರ ನೀಡುವ ಯೋಜನೆಯು ಸಹ ಒಂದು ಉತ್ತಮ ಕಾರ್ಮಿಕ ಪರ ಯೋಜನೆಯಾಗಿರುತ್ತದೆ.

ಪ್ರತಿ ವರ್ಷವೂ ಸರಾಸರಿ 1000 ವಿದ್ಯಾರ್ಥಿಗಳಿಗೆ ರೂ.25.00 ಲಕ್ಷಗಳಷ್ಟು ನಗದು ಪುರಸ್ಕಾರವನ್ನು ವಿತರಿಸಲಾಗುತ್ತಿದೆ. ಪ್ರಸಕ್ತ ವರ್ಷದಿಂದ ಸಿಬ್ಬಂದಿಗಳ ಮಕ್ಕಳಗೆ ಪ್ರೋತ್ಸಾಹಿಸಿ ಉತ್ತೇಜಿಸುವ ನಿಟ್ಟಿನಲ್ಲಿ ನಗದು ಪುರಸ್ಕಾರದ ಮೊತ್ತವನ್ನು ಹೆಚ್ಚಿಸಲಾಗಿದೆ. ಸದರಿ ಕ್ರಮದಿಂದ ಒಟ್ಟು ಅಂದಾಜು ವಾರ್ಷಿಕ ರೂ.17,64,000/- ಗಳಷ್ಟು ಹೆಚ್ಚುವರಿ ಮೊತ್ತ ಉಂಟಾಗುತ್ತದೆ.

| ನಗದು ಬಹುಮಾನದ ಮೊತ್ತ (ರೂಗಳಲ್ಲಿ) | | | | | | |
|---|---|---|---|---|---|---|
| **ಎಸ್.ಎಸ್.ಎಲ್.ಸಿ** | 70 TO 80 % | 80 TO 90 % | ABOVE 90 % | | **ಪದವಿ** | ಶೇ.60 ಕ್ಕಿಂತ ಹೆಚ್ಚು |
| ಇಂಗ್ಲೀಷ್ | 2000 | 3000 | 3500 | | ಇಂಗ್ಲೀಷ್ | 4500 |
| ಕನ್ನಡ | 2500 | 3500 | 4000 | | ಕನ್ನಡ | 5000 |
| **ಪಿಯುಸಿ** | 70 TO 80 % | 80 TO 90 % | ABOVE 90 % | | **ಸ್ನಾತಕೋತ್ತರ ಪದವಿ** | 6000 |
| ಇಂಗ್ಲೀಷ್ | 2500 | 3500 | 4000 | | | |
| ಕನ್ನಡ | 3000 | 4000 | 4500 | | | |

ಅಂದಾಜು ಒಟ್ಟು 42.67 ಲಕ್ಷ ರೂಗಳ ನಗದು ಪುರಸ್ಕಾರವನ್ನು ಪ್ರಸಕ್ತ ವರ್ಷದಲ್ಲಿ ನೀಡಲಾಗುವುದು.

ಸಹಿ/-

ಸಾರ್ವಜನಿಕ ಸಂಪರ್ಕಾಧಿಕಾರಿ